ಪೌಷ್ಟಿಕತೆ ದೃಷ್ಟಿಯಲ್ಲಿ ಮೀನು ಒಂದು ಉತ್ತಮ ಆಹಾರ. ಇತರೆ ಮಾಂಸಗಳಿಗಿಂತ ಶ್ರೇಷ್ಠ ಹಾಗೂ ಆರೋಗ್ಯದ ದೃಷ್ಟಿಯಿಂದಲೂ ಉತ್ತಮ ಮತ್ತು ಕಡಿಮೆ ಖರ್ಚಿನಲ್ಲಿ ದೊರೆಯಬಹುದಾದ ಆಹಾರ. ಸುಲಭವಾಗಿ ಪಚನವಾಗುವಂತಹ ಒಳ್ಳೆಯ ಗುಣಮಟ್ಟದ ಸಸಾರಜನಕ, ಹೆಚ್ಚಿನ ಪ್ರಮಾಣದಲ್ಲಿ ಒಮೇಗ-3 ಗುಂಪಿನ ಅಪರಿಪಕ್ವ ಕೊಬ್ಬಿನ ಆಮ್ಲ, ಕೊಬ್ಬಿನಲ್ಲಿ ಕರಗಿರುವ ಎ, ಡಿ, ಇ, ಕೆ, ಜೀವಸತ್ವಗಳು ಹಾಗೂ ಅಧಿಕ ಪ್ರಮಾಣದಲ್ಲಿ ಲವಣ (ಕ್ಯಾಲ್ಸಿಯಂ, ರಂಜಕ, ಕಬ್ಬಿಣ, ಐಯೊಡಿನ್ ಮತ್ತು ಸೆಲೇನಿಯಂ) ಗಳನ್ನು ಹೊಂದಿದೆ. ಆ ಕಾರಣ ಗ್ರಾಮೀಣ ಮತ್ತು ನಗರಪ್ರದೇಶಗಳಲ್ಲಿ ಮೀನಿಗೆ ಅಪಾರವಾದ ಬೇಡಿಕೆಯಿದೆ.


ಸಾಂಪ್ರದಾಯ ಮೀನುಗಾರಿಕೆ ಮತ್ತು ಪಾಲನೆಯಿಂದ ಉತ್ಪಾದಿಸಿದ ಮೀನು, ಪ್ರಾಚೀನ ಕಾಲದಿಂದಲೂ ಭಾರತೀಯರ ಆಹಾರ ರೀತಿಯಲ್ಲಿ ಮಹತ್ತರವಾದ ಪಾತ್ರವಹಿಸಿ ಪೌಷ್ಟಿಕ ಆಹಾರದ ಕೊರತೆ ನಿಭಾಯಿಸುವಲ್ಲಿ ಸಹಕಾರಿಯಾಗಿದೆ. ರಾಷ್ಟ್ರದಲ್ಲಿ ಮೀನುಗಾರಿಕೆ ಪ್ರತಿವರ್ಷ ಶೇಕಡ 4 ರಿಂದ 6ರ ಪ್ರಮಾಣದಲ್ಲಿ ಅಭಿವೃದ್ಧಿಯಾಗುತ್ತಿದ್ದು ಸುಮಾರು 9.57 ದಶಲಕ್ಷ ಟನ್‌ನಷ್ಟು ಮೀನು ಉತ್ಪಾದನೆಯಾಗುತ್ತಿದೆ. ದೇಶವು ಮೀನುಗಾರಿಕೆಯಿಂದ ಸುಮಾರು 33,000 ಕೋಟಿಗೂ ಹೆಚ್ಚು ವಿದೇಶಿ ವಿನಿಮಯವನ್ನು ಪ್ರತಿವರ್ಷ ಗಳಿಸುತ್ತಿದೆ.

**ಸಮಗ್ರ ಮೀನುಪಾಲನೆ:**

ಒಂದು ಆಯಕಟ್ಟಿನ ಜಾಗದಲ್ಲಿ ಒಂದಕ್ಕಿಂತ ಹೆಚ್ಚು ಕೃಷಿ ಚಟುವಟಿಕೆಗಳನ್ನು ಮಾಡುವುದಕ್ಕೆ ಸಮಗ್ರ ಕೃಷಿಯೆನ್ನುತ್ತಾರೆ. ಮೀನುಕೃಷಿಯು ಇತರೆ ಎಲ್ಲಾ ಕೃಷಿಪದ್ಧತಿಗಳೊಂದಿಗೆ ಸಹಜವಾಗಿ ಹೊಂದಿಕೊಳ್ಳುತ್ತದೆ. ವ್ಯವಸಾಯ ಮತ್ತು ಇತರೆ ಉದ್ದೇಶಗಳಿಗೆಂದು ನಿರ್ಮಿತವಾದ ಜಲಸಂಪನ್ಮೂಲಗಳಲ್ಲಿ ಮೂಲ ಉದ್ದೇಶಕ್ಕೆ ಧಕ್ಕೆಯಾಗದ ರೀತಿ ಮೀನುಸಾಕಣೆ ಮಾಡಬಹುದು. ಅಲ್ಲದೆ, ಒಂದೇ ಕಸುಬಿಗೆ ಉಪಯೋಗಿಸುತ್ತಿರುವ ಜಮೀನುಗಳಲ್ಲಿ ಉತ್ಪಾದನೆ ಮತ್ತು ಉತ್ಪಾದಕತೆ ತಗ್ಗುತ್ತಿದೆ. ಆದ್ದರಿಂದ, ಮೀನುಸಾಕಣೆಯನ್ನು ಕೃಷಿ, ತೋಟಗಾರಿಕೆ, ರೇಷ್ಮೆ ಸಾಕಣೆ, ಕೋಳಿ ಮತ್ತು ಡೈರಿ, ಹಂದಿಸಾಕಣೆ ಹಾಗು ಇತರೆ ಕಸುಬುಗಳ ಜೊತೆ ಸಮಗ್ರವಾಗಿ ಕೈಗೊಳ್ಳಬಹುದು. ಈ ಕಸುಬುಗಳ ತ್ಯಾಜ ವಸ್ತುಗಳನ್ನು ಮೀನಿಗೆ ಆಹಾರವಾಗಿ ಬಳಸಿಕೊಂಡು ಉತ್ಪಾದನಾ ವೆಚ್ಚದಲ್ಲಿಯೂ ಸಹ ಉಳಿತಾಯ ಮಾಡಬಹುದು. ಒಳನಾಡು ಮೀನುಗಾರಿಕೆಯನ್ನು ಗ್ರಾಮದ ಇತರೆ ಕಸುಬುಗಳ ಜೊತೆ ಸಮಗ್ರಗೊಳಿಸಿ ಮೀನು ಉತ್ಪಾದನೆ ಕೈಗೊಂಡಲ್ಲಿ ಗ್ರಾಮದ ವಾತಾವರಣದ ಸುಚಿತ್ವ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ನಿಭಾಯಿಸುವ ಶಕ್ತಿಹೊಂದಿ ಸರ್ವತೋಮುಖ ಅಭಿವೃದ್ಧಿ ಸಾಧಿಸಬಹುದಾಗಿದೆ.


**ಸಮಗ್ರ ಕೃಷಿಪದ್ಧತಿಯ ಉದ್ದೇಶಗಳು:**

ಒಂದು ಕಸುಬಿನ ತ್ಯಾಜ್ಯ ವಸ್ತು ಮತ್ತೊಂದು ಕಸುಬಿಗೆ ಮೂಲ/ಕಚ್ಚಾವಸ್ತುವಾಗಬೇಕು. ಪರಸ್ಪರ ಹೊಂದಾಣಿಕೆ ಮತ್ತು ಉಪಯೋಗಗಳಿರಬೇಕು. ಕಡಿಮೆ ಸ್ಥಳದಲ್ಲಿ ಒಂದಕ್ಕಿಂತ ಹೆಚ್ಚು ಚಟುವಟಿಕೆಗಳಿಗೆ ಅವಕಾಶವಿರಬೇಕು. ನಿರ್ವಹಣೆಗೆ ಹೆಚ್ಚು ಕಾರ್ಮಿಕರು ಬೇಕಾಗಬಾರದು. ಕಡಿಮೆ ಖರ್ಚಿನಲ್ಲಿ ಹೆಚ್ಚು ಆದಾಯವಿರಬೇಕು.





**ಭತ್ತ ಮತ್ತು ಮೀನುಸಾಕಣೆ**

ಜಪಾನ್, ಇಂಡೋನೇಶಿಯಾ ಮತ್ತು ಚೀನಾ ದೇಶಗಳಲ್ಲಿ ಪ್ರಚಲಿತವಿರುವ ಈ ಪದ್ಧತಿ, ಭಾರತದ ಈಸಾನ್ಯ ರಾಜ್ಯಗಳಾದ ಅರುಣಾಚಲ ಪ್ರದೇಶ, ಮೇಘಾಲಯ, ಅಸ್ಸಾಂ ಮತ್ತು ಕೇರಳ, ಪಶ್ಚಿಮ ಬಂಗಾಳದಲ್ಲಿ ಚಾಲ್ತಿಯಲ್ಲಿದೆ. ನೀರು ನಿಲ್ಲುವ ತಗ್ಗು ಪ್ರದೇಶಗಳಲ್ಲಿ ಭತ್ತ ಬೆಳೆಯುತ್ತಿದ್ದರೆ, ಅಂತಹ ಜಮೀನುಗಳಲ್ಲಿ, ಈ ಪದ್ಧತಿಯನ್ನು ಅಳವಡಿಸಬಹುದು.




ಗದ್ದೆಯ ಎರಡೂ ಬದಿಯಲ್ಲಿ/ಸುತ್ತಲೂ ಇರುವ ಕೊಳ




ಗದ್ದೆಯ ಮಧ್ಯಭಾಗದಲ್ಲಿ ಇರುವ ಕೊಳ

# ಮೀನುಗಾರಿಕಾ ಮಹಾವಿದ್ಯಾಲಯ

## ಮಂಗಳೂರು

**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ**

# 'ಮೀನು ಮತ್ತು ಕೃಷಿ' ಸಮಗ್ರ ಬೇಸಾಯ ಪದ್ಧತಿಗಳು









**ಪ್ರಧಾನ ಲೇಖಕರು:**
**ಡಾ. ಎ.ಟಿ. ರಾಮಚಂದ್ರ ನಾಯ್ಕ**
ಪ್ರಾಧ್ಯಾಪಕರು

**ಸಹ ಲೇಖಕರು:**
**ಡಾ. ಶಿವಕುಮಾರ ಎಂ.**
ಪ್ರಾಧ್ಯಾಪಕರು

**ಮಾಹಿತಿಗಾಗಿ ಸಂಪರ್ಕಿಸಿ:**
ಡೀನ್, ಮೀನುಗಾರಿಕಾ ಮಹಾವಿದ್ಯಾಲಯ
ಮಂಗಳೂರು–575 002 ದೂ: 0824 224 9256

**ಪ್ರಕಟಣೆ:**
ಪ.ಜಾ.ಉ.ಯೋ/ಪ.ಪಂ.ಉ.ಯೋ. ಧನ ಸಹಾಯ
2020

ಗದ್ದೆಯ ಶೇಕಡಾ 13–30% ಕೊಳವನ್ನು ನಿರ್ಮಿಸಿಕೊಳ್ಳಬಹುದು. ಭತ್ತದ ಬೆಳೆ 110–140 ದಿನಗಳ ಅವಧಿಯಾದ್ದರಿಂದ, ಈ ಕೊಳಗಳನ್ನು ಮೀನುಮರಿ ಪಾಲನೆಗೆ ಅಥವಾ ಮೀನುಸಾಕಣೆಗೆ ಉಪಯೋಗಿಸುವುದು ಒಳಿತು. ಪ್ರತೀ ಚದರ ಮೀಟರ್ ನೀರಿನ ವಿಸ್ತೀರ್ಣಕ್ಕೆ 100 ಗೆಂಡೆ ಸ್ಪಾನ್ ಅಥವಾ 8–10 ಫ್ರೈಗಳನ್ನು ಬಿಡಬಹುದು. ಸುಮಾರು 40 ದಿನಗಳಲ್ಲಿ ಸ್ಪಾನ್‌ಗಳು 4–5 ಸೆಂ.ಮೀ., 90 ದಿನಗಳಲ್ಲಿ 8–10 ಸೆಂ.ಮೀ. ಬೆಳೆಯುತ್ತವೆ. ಫ್ರೈಗಳು ಕೇವಲ 25 ದಿನದಲ್ಲಿ 4–5 ಸೆಂ.ಮೀ., 60 ದಿನಗಳಲ್ಲಿ 8–10 ಸೆಂ.ಮೀ. ಬೆಳೆಯುತ್ತವೆ. ಸ್ಪಾನ್‌ಗಳಾದರೆ 20%, ಫ್ರೈಗಳಾದರೆ 60% ಬದುಕುಳಿಯುವಿಕೆಯನ್ನು ನಿರೀಕ್ಷಿಸಬಹುದು.

ಮೀನುಸಾಕಣೆ ಮಾಡುವುದಾದರೆ, ಬೆರಳುದ್ದ ಗಾತ್ರದ ಮೀನುಗಳನ್ನು ಪ್ರತೀ ಚದರ ಮೀಟರ್ ನೀರಿನ ವಿಸ್ತೀರ್ಣಕ್ಕೆ 1–2 ಮರಿಗಳನ್ನು ಬಿಟ್ಟು 120–130 ದಿನಗಳವರೆಗೆ ಸಾಕಣೆ ಮಾಡಬಹುದು. ಮೀನುಗಳಿಗೆ ಆಹಾರವಾಗಿ ಕಡ್ಲೆಕಾಯಿ ಹಿಂಡಿ ಮತ್ತು ಅಕ್ಕಿತೌಡುಗಳನ್ನು ಸಮಪ್ರಮಾಣದಲ್ಲಿ ಮಿಶ್ರಣ ಮಾಡಿ, ಮೀನಿನ ಒಟ್ಟು ತೂಕದ ಶೇಕಡಾ 3–5 ರಷ್ಟನ್ನು ಪ್ರತೀದಿನ ಬೆಳಿಗ್ಗೆ 9–10 ಗಂಟೆಯ ಅವಧಿಯಲ್ಲಿ ಕೊಳಕ್ಕೆ ಹಾಕಬೇಕು. ಮೀನುಗಳು 150–200 ಗ್ರಾಂ ಬೆಳೆಯುತ್ತವೆ. ಮೇಲೆ ತಿಳಿಸಿದ ರಾಜ್ಯಗಳಲ್ಲಿ ಸಣ್ಣ ಮೀನುಗಳಿಗೇ ಬೇಡಿಕೆ ಇರುವ್ಯದರಿಂದ ಮಾರುಕಟ್ಟೆಯ ಸಮಸ್ಯೆ ಇಲ್ಲ. ಆದರೆ, ನಮ್ಮ ರಾಜ್ಯದಲ್ಲಿ ಸಣ್ಣ ಮೀನುಗಳಿಗೆ ಬೇಡಿಕೆ ಇಲ್ಲವಾದ್ದರಿಂದ, ಆ ಮೀನುಗಳನ್ನು ಇತರೆ ದೊಡ್ಡ ಕೊಳಗಳಿಗೆ ಬಿಟ್ಟು ಮಾರುಕಟ್ಟೆ ಗಾತ್ರಕ್ಕೆ ಬಂದ ನಂತರ ಕಟಾವು ಮಾಡಬಹುದು.

### ಹಂದಿ/ಹಸು ಮತ್ತು ಮೀನುಸಾಕಣೆ

ಕೊಳದ ಬದುಗಳ ಮೇಲೆ ಹಂದಿ/ಹಸುಗಳ ಶೆಡ್‌ಗಳನ್ನು ನಿರ್ಮಾಣ ಮಾಡಿ, ಪ್ರಾಣಿಗಳ ಮಲಮೂತ್ರ ನೇರವಾಗಿ ಕೊಳಕ್ಕೆ ಬೀಳುವ ವ್ಯವಸ್ಥೆ ಮಾಡಬೇಕು. ಒಂದು ಹೆಕ್ಟೇರ್ ಪ್ರದೇಶದ ನೀರು ವಿಸ್ತೀರ್ಣಕ್ಕೆ 60–70 ಹಂದಿಗಳು ಸಾಕಾದರೆ, 15–20 ಹಸುಗಳು ಬೇಕಾಗುತ್ತವೆ. ಇದಕ್ಕಿಂತ ಹೆಚ್ಚು ಪ್ರಾಣಿಗಳು ಇದ್ದಲ್ಲಿ ಅವುಗಳ ಗೊಬ್ಬರವನ್ನು ಬೇರೆಡೆ ಹಾಕಬೇಕು. ಹಂದಿ/ಹಸು ತಳಿ ಮತ್ತು ನಿರ್ವಹಣೆಯ ಬಗ್ಗೆ ನುರಿತ ಪಶುವೈದ್ಯರ ಬಳಿ ತಿಳಿಯಬಹುದು. ಪ್ರಾಣಿಗಳ ಶೆಡ್‌ಗಳು ಕೊಳದ ಬದುವಿನ ಮೇಲೆಯೇ ಇರಬೇಕೆಂಬ ನಿಯಮವಿಲ್ಲ. ಎರಡೂ ಚಟುವಟಿಕೆಗಳು ದೂರದೂರವಿದ್ದರೆ, ಪೈಪ್‌ಗಳ ಮುಖಾಂತರ ಅವುಗಳ ತ್ಯಾಜ್ಯವನ್ನು ಕೊಳಕ್ಕೆ ಬೀಳುವಂತೆ ಮಾಡಬಹ್ಮದು (ಚಿತ್ರದಲ್ಲಿ ತೋರಿಸಿರುವಂತೆ) ಅಥವಾ ಅಲ್ಲಿಂದ ಕೈಗಾಡಿಗಳಿಂದ ತಂದು ಕೊಳಕ್ಕೆ ಹಾಕಬಹುದು.

### ಕೋಳಿ/ಬಾತುಕೋಳಿ ಮತ್ತು ಮೀನುಸಾಕಣೆ

ಕೊಳದ ಮೇಲೆ/ಬದುಗಳ ಕೋಳಿ/ಬಾತುಕೋಳಿ ಶೆಡ್‌ಗಳನ್ನು ನಿರ್ಮಾಣ ಮಾಡಿ, ಅವುಗಳ ಹಿಕ್ಕೆಯನ್ನು ನೇರವಾಗಿ ಕೊಳಕ್ಕೆ ಬೀಳುವಂತೆ ಮಾಡಬಹುದು. ಸಣ್ಣ ಪ್ರಮಾಣದಲ್ಲಿ ಇದು ಲಾಭದಾಯಕವಾಗಿರುತ್ತದೆ. ಒಂದು ಹೆಕ್ಟೇರ್ ಪ್ರದೇಶದ ನೀರು ವಿಸ್ತೀರ್ಣಕ್ಕೆ 150–220 ಮೊಟ್ಟೆಕೋಳಿಗಳು, 200–300 ಬಾತುಕೋಳಿಗಳು ನೀಡುವ ಗೊಬ್ಬರ ಸಾಕಾಗುತ್ತದೆ. ಮೀನುಮರಿಗಳನ್ನು ಕೊಳಕ್ಕೆ ಬಿಟ್ಟ ಎರಡು ತಿಂಗಳುಗಳ ನಂತರ ಬಾತುಕೋಳಿಗಳನ್ನು ನೀರಿಗೆ ಬಿಡಬೇಕು. ಕೋಳಿ/ಬಾತುಕೋಳಿ ಇಕ್ಕೆಯಲ್ಲಿರುವ ಅಜೀರ್ಣವಾದ ಆಹಾರ ಸಾಮಾನ್ಯ ಗೆಂಡೆಮೀನಿಗೆ ಆಹಾರವಾದರೆ, ಅವುಗಳಲ್ಲಿರುವ ಸಾವಯವ ಪೋಶಕಾಂಶಗಳಿಂದ ಕೊಳದಲ್ಲಿ ಹೆಚ್ಚು ನೈಸರ್ಗಿಕ ಅಹಾರ ಉತ್ಪಾದನೆಯಾಗಿ, ಮೀನಿನ ಉತ್ತಮ ಇಳುವರಿ ಪಡೆಯಬಹುದು. ಇದಕ್ಕಿಂತ ಹೆಚ್ಚು ಕೋಳಿ/ಬಾತುಕೋಳಿ ಇದ್ದಲ್ಲಿ ಅವುಗಳ ಗೊಬ್ಬರವನ್ನು ಬೇರೆಡೆ ಹಾಕಬೇಕು. ಕೋಳಿ/ಬಾತುಕೋಳಿ ನಿರ್ವಹಣೆಯ ಬಗ್ಗೆ ನುರಿತ ಪಶುವೈದ್ಯರ ಬಳಿ ತಿಳಿಯಬಹುದು.

ಖಾಕಿ ಕ್ಯಾಂಪ್‌ಬೆಲ್ ಜಾತಿಯ ಬಾತುಕೋಳಿ, ಟರ್ಕಿ ಕೋಳಿ, ಜಪಾನ್ ಕ್ವೈಲ್, ಸ್ವರ್ಣದಾರ ಕಲರ್ ಬ್ರಾಯ್ಲರ್ ಕೋಳಿಗಳು ಬೆಂಗಳೂರಿನಿಂದ 25 ಕಿ.ಮೀ. ದೂರದಲ್ಲಿರುವ ಕುಕ್ಕುಟ ಸಂಶೋಧನಾ ಕೇಂದ್ರ, ಹೆಸರಘಟ್ಟದಲ್ಲಿ ದೊರೆಯುತ್ತವೆ. (ಸೆಂಟ್ರಲ್ ಪೌಲ್ಟ್ರಿ ಡೆವಲಪ್ ಮೆಂಟ್ ಆರ್ಗನೈಜೇಷನ್: 080 2846 6236)

### ಬದುವಿನ ಮೇಲೆ ಕೃಷಿ

ಒಂದು ನಿರ್ಧಿಷ್ಟ ಪ್ರದೇಶದಲ್ಲಿ ಕೊಳ ನಿರ್ಮಾಣ ಮಾಡುವಾಗ ಶೇ. 30 ರಷ್ಟು ಜಾಗ ಬದುಗಳ ನಿರ್ಮಾಣಕ್ಕೆ ತಗಲುತ್ತದೆ. ಬದುಗಳನ್ನು ಸುಮ್ಮನೆ ಖಾಲಿ ಬಿಡದೆ, ಅವುಗಳ ಮೇಲೆ ಸೀಮೆಹುಲ್ಲು, ಬಾಳೆ, ನುಗ್ಗೆಕಾಯಿ, ಕುಂಬಳ, ಹೂಕೋಸು, ಬದನೆ, ಪರಂಗಿ, ಹೀರೆಕಾಯಿ, ಬೆಂಡೆಕಾಯಿ, ಹಾಗಲ ಹೀಗೆ ಹಲವಾರು ಬೆಳೆಗಳನ್ನು ಬೆಳೆದು ತೋಟದ ಒಟ್ಟಾರೆ ಉತ್ಪಾದನೆ ಮತ್ತು ಆಧಾಯವನ್ನು ಹೆಚ್ಚಿಸಿಕೊಳ್ಳಬಹುದು. ಚಿತ್ರದಲ್ಲಿ ಬದುವಿನ ಮೇಲೆ ಹೀರೆಕಾಯಿ ಮತ್ತು ಎಲೆಕೋಸು ಬೆಳೆದಿರುವುದನ್ನು ಕಾಣಬಹುದು. ಹೀಗೆ ಬೆಳೆಯುವ ಬೆಳೆಗಳನ್ನು ಸಾಧ್ಯವಾದಷ್ಟು ಸಾವಯವ ಗೊಬ್ಬರಗಳನ್ನು ಹಾಕಿ ಬೆಳೆಸಿದಾಗ, ಮನೆಗೆ ಉತ್ತಮ ಸಾವಯವ ಸೊಪ್ಪು, ತರಕಾರಿಗಳು ದೊರೆಯುತ್ತವೆ. ಮನೆಯ ಅಗತ್ಯಕ್ಕಿಂತ ಹೆಚ್ಚು ಉತ್ಪಾದನೆಯಾದ ಪಕ್ಷದಲ್ಲಿ ಅವುಗಳನ್ನು ಸಾವಯವ ತರಕಾರಿಗಳೆಂದು ಬ್ರಾಂಡ್ ಮಾಡಿ ಹೆಚ್ಚು ಬೆಲೆಗೆ ಮಾರಟ ಮಾಡಬೇಕು.

ಕೃಷಿ/ ಜಲಕೃಷಿಯಲ್ಲಿ ಇದಮಿತ್ಥಂ ಎಂದು ಸಿದ್ಧಾಂತ ಬರೆಯಲಾಗುವುದಿಲ್ಲ. ಎಲ್ಲವೂ, ನಿಮ್ಮಲ್ಲಿರುವ ಸಂಪನ್ಮೂಲದ ಲಭ್ಯತೆ, ಅಲ್ಲಿನ ಅವಕಾಶ ಮತ್ತು ಕೊರತೆಗಳು, ನಿಮಗಿರುವ ವೈಜ್ಞಾನಿಕ ಮತ್ತು ವ್ಯವಹಾರಿಕ ಜ್ಞಾನ, ಬಂಡವಾಳ ಹೂಡಿಕೆಯುಯ ಶಕ್ತಿ, ಆಯ್ಕೆಮಾಡಿಕೊಂಡ ಸಾಕಣೆ ಮಾದರಿ, ನಿರ್ವಹಣೆ ಮತ್ತು ಮಾರುಕಟ್ಟೆಯ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ ವಿಚಾರಗಳನ್ನು ಸರಿಯಾಗಿ ಮನನ ಮಾಡಿಕೊಂಡು, ಮಾರುಕಟ್ಟೆಯ ಸೂಕ್ಷ್ಮಗಳನ್ನು ಅರ್ಥಮಾಡಿಕೊಂಡು ವೈಜ್ಞಾನಿಕವಾಗಿ ಮಾಡಬೇಕು. ಕಾಲಕಾಲಕ್ಕೆ ತಜ್ಞರ ಸಲಹೆಯನ್ನು ಪಡೆಯಲು ಮರೆಯಬಾರದು.



